ತುಳು, ಕೊಡವ, ಕೊಂಕಣಿ, ಅಕಾಡಮಿಗಳಿಗೆ ಅನುದಾನ.

2304(3384) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) :— ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಳು, ಕೊಂಕಣಿ, ಕೊಡವ ಅಕಾಡೆಮಿಗಳಿಗೆ ಹೆಚ್ಚಿನ ಅನುದಾನ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವರು) :—

ಅ) ವಾರ್ಷಿಕ ಅನುದಾನವನ್ನು ನೀಡಲಾಗುತ್ತಿದೆ.

ಆ) ಅಕಾಡೆಮಿಗಳ ಬೇಡಿಕೆಯು ಬಂದಲ್ಲಿ ಕಾರ್ಯಕ್ರಮಗಳ ಸ್ವರೂಪವನ್ನು ಗಮನಿಸಿ ಹೆಚ್ಚಿನ ಅನುದಾನ ನೀಡಲಾಗುತ್ತಿದೆ.

ಅಧ್ಯಕ್ಷರು :— ಮಂಡಿಸಲಾಯಿತು.

ಸಭೆಯು ವಿರಾಮಕ್ಕೆಂದು 2 ಗಂಟೆ 58 ನಿಮಿಷಕ್ಕೆ ಮಂದೂಡಲಾಯಿತು.

(ಸದನವು 4-20 ನಿಮಿಷಕ್ಕೆ ಸಮಾವೇಶಗೊಂಡಿತು)

ಅಧ್ಯಕ್ಷರು (ಶ್ರೀಎಂ.ವಿ. ವೆಂಕಟಪ್ಪನವರು) ಸನ್ಮಾನ್ಯ ಅಧ್ಯಕ್ಷ ಪೀಠವನ್ನಂಲಕರಿಸಿದರು.

ಪ್ರಕಟಣೆ

ವಿಷಯ: ವಿಧಾನಸಭಾ ಸದಸ್ಯರಾದ ಶ್ರೀ ಚೌಡರೆಡ್ಡಿರವರಿಗೆ ಅಧಿವೇಶನಕ್ಕೆ ಗೈರುಹಾಜರಾಗಲು ಅನುಮತಿ ನೀಡುವ ಬಗ್ಗೆ

ಸನ್ಮಾನ್ಯ ಸಭಾಧ್ಯಕ್ಷರು

ವಿಧಾನಸಭಾ ಸದಸ್ಯರಾದ ಶ್ರೀ ಚೌಡರೆಡ್ಡಿ ಅವರು ದಿನಾಂಕ: 21ನೇ ಜುಲೈ, 2001 ರಿಂದ 8ನೇ ಆಗಸ್ಟ್, 2000, ರವರೆಗೂ ಉತ್ತರ ಭಾರತ ಪ್ರವಾಸವನ್ನು ಕೈಗೊಳ್ಳಲಿರುವುದರಿಂದ ಅಧಿವೇಶನಕ್ಕೆ ದಿನಾಂಕ: 23-7-2000ರಿಂದ ಗೈರು ಹಾಜರಾಗಲು ಅನುಮತಿಯನ್ನು ಕೋರಿರುತ್ತಾರೆ.

ಶ್ರೀ ಚೌಡರೆಡ್ಡಿ ಅವರಿಗೆ ಮೇಲೆ ಸೂಚಿಸಿದ ಅವಧಿಯಲ್ಲಿ ಅಧಿವೇಶನಕ್ಕೆ ಗೈರುಹಾಜರಾಗಲು ಸದನವು ಅನುಮತಿ ನೀಡಿದೆಯೆಂದು ಭಾವಿಸುತ್ತೇನೆ.

(ಸದನವು ಮಾನ್ಯ ಸದಸ್ಯರಾದ ಶ್ರೀ ಚೌಡರೆಡ್ಡಿರವರು ಮೇಲ್ಕಂಡ ಅವಧಿಯಲ್ಲಿ ಅಧಿವೇಶನಕ್ಕೆ ಗೈರುಹಾಜರಾಗಲು ಅನುಮತಿ ನೀಡಿತು.)

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :(ಅ) ಬೆಂಗಳೂರು ನಗರದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ.

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಮತ್ತೊಂದು ಕೊಲೆ ಸಂಭವಿಸಿದೆ. ಶನಿವಾರದಂದು ಶಿವಾಜಿನಗರದ ವೀಲರ್ ರಸ್ತೆಯಲ್ಲಿ ಒಬ್ಬ ಜೂಯಲರ್ಸ್ ಮರ್ಡರ್ ಆಗಿದೆ. ಅದರ ಹಿಂದಿನ ದಿವಸ ಬಸವನಗುಡಿಯ ಮೊಹಮಡನ್ ಬ್ಲಾಕ್‌ನಲ್ಲಿ ಒಬ್ಬ ಮೆಡಿಕಲ್ ಸ್ಟೋರ್ಸ್ ಮಾಲೀಕನ ಹತ್ಯೆಯಾಗಿದೆ. ಇಡೀ ಬೆಂಗಳೂರು ನಗರ ತಲ್ಲಣಗೊಂಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಮಾನ್ಯ ಅಧ್ಯಕ್ಷರೆ, ಒಂದು ಕಡೆ ಈ ರೀತಿ ದಿನಕ್ಕೊಂದು ಕೊಲೆ, ವಾರಕ್ಕೆ ಹತ್ತು ಅಪಹರಣ ಎಲ್ಲಾ ನಡೆಯುತ್ತಿರುವಾಗ ಸರ್ಕಾರದಿಂದ ಜನಸಾಮಾನ್ಯರಿಗೆ ಏನು ಮೆಸೇಜ್ ಬರುತ್ತಿದೆ ಎನ್ನುವುದು ಮುಖ್ಯ. ಈ ದೇಶದಲ್ಲಿ ಬಹಳ ದೊಡ್ಡ ಒಬ್ಬ ನಾಯಕರು ಇದ್ದರು. ಅವರು ಹೇಳಿದರು ಒಂದು ಸಲ. ``Corruption is a global phenomenon ಎಂದು.'' He is giving clean chit to the corrupt people ಅಂತ. ಅದಾದ ನಂತರ ಇನ್ನೊಬ್ಬ ನಾಯಕರು ಹೇಳಿದರು, ``Rape is a natural human instinct'' ಎಂದು ಅಂತ. ಅವರಿಬ್ಬರಿಗೂ ನಾನೇನು ಕಡಿಮೆ ಅಂತ ನಮ್ಮ ರಾಜ್ಯದ ಗೃಹ ಸಚಿವರು ಹೇಳುತ್ತಿದ್ದಾರೆ'' Crime is a natural phenomenon of any growing matropolis.'' ಎಂದು ಇದನ್ನು ಇವರು ಪತ್ರಿಕೆಯಲ್ಲಿ ಹೇಳುತ್ತಾರೆ.

Rape and murders are part and parcel of Metro life ಎಂದು ಹೇಳುತ್ತಾರೆ. What message the society will get; what message the culprits will get? ಈ ರೀತಿ ನಾವು ಹೇಳಿಕೆ ಕೊಡುವಾಗ, ರಾಜ್ಯ ಎಲ್ಲವನ್ನೂ ನಾವು ಕಂಡೋನ್ ಮಾಡುತ್ತೇವೆಂದರೆ ಆ ಪ್ರಜೆಗಳಲ್ಲಿ ಅದರಲ್ಲೂ ವಿಶೇಷವಾಗಿ, ಈ ರೀತಿ ಮೈಂಡ್‌ಸೆಟ್ ಇರುವಂತಹ ಜನರಲ್ಲಿ ಯಾವ ರೀತಿ ಒಂದು ಎಫೆಕ್ಟ್ ಆಗಬಹುದು ಎನ್ನುವುದನ್ನು ನಾವು ಯೋಚಿಸಬೇಕು. ನಾನು ಬೆಂಗಳೂರಿನಲ್ಲಿ ಹುಟ್ಟಿದ್ದು. ಗನ್ ಕಲ್ಚರ್ ಎಂಬುದನ್ನು ನಾನು ಕೇಳಿರಲಿಲ್ಲ. ಸುಪಾರಿ ಎನ್ನುವುದನ್ನು ಕೇಳಿರಲಿಲ್ಲ. ಅದರ ಬಗ್ಗೆ ಗೊತ್ತೇ ಇರಲಿಲ್ಲ. ಎಲ್ಲೋ ಓದಿದ್ದು, ಅದರ ಬಗ್ಗೆ ಕುತೂಹಲದಿಂದ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೆ. ಆದರೆ ಇವತ್ತು Gun culture has made a grandentry in this city of ours. ಭಯವಾಗುತ್ತದೆ. ಯಾವುದಾದರೊಂದು ಇಷ್ಯೂ ಮೇಲೆ ಇನ್ನು ಮುಂದೆ ಮಾತನಾಡುವುದಕ್ಕೆ ಜನ ಭಯಪಡಬಹುದು. ಗನ್ ಕಲ್ಚರ್ ಇದೆ. ಸುಪಾರಿ